Doc-265
T-7.2

R No KRNN 12 30 - 3 - 74



ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ
First Golden Jubilee Celebrated Paper in The State
** Now in 57 th Year **
'Satyavadi' daily, Mysore 4

ಸ್ವಾಮಿ ಪ್ರಕಾರರು: ಆರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರವರ್ತಿನಿ ಎಂ. ಎಸ್. ಕೃಷ್ಣರಾವ್ 3 ಪುಟ

ಭೂ ಸುಧಾರಣೆ ವಿರೋಧಿಸಿ ಉಪವಾಸ

ಮೈಸೂರು ರೇಸ್

ಮೈಸೂರು— ರೇಸ್ ಕ್ಲಬ್‌ನವರು ಸೆಪ್ಟಂಬರ್-ಅಕ್ಟೋಬರ್‌ನಲ್ಲಿ ನಡೆಸಲಿರುವ ಕುದುರೆ ಜೂಜುಗಳಿಗೆ 208 ಪ್ರವೇಶಗಳು ಬಂದಿರುವುದಾಗಿ ಗೊತ್ತಾಗಿದೆ.

★

ಜಿಲ್ಲಾ ಮಟ್ಟದ ಪತ್ರಿಕೆಗಳು

ಕೋಲಾರ— ಕೆಜಿಎಫ್ ಜಿಲ್ಲಾ ಪತ್ರಿಕೋದ್ಯೋಗಿಗಳ ಸಂಘದಲ್ಲಿ ವಾರ್ತಾ ಇಲಾಖಾ ಮುಖ್ಯಾಧಿಕಾರಿಗಳಾದ ಶ್ರೀ ಬಿ. ಜಿ. ಕುಲಕರ್ಣಿಯವರು ಮಾಡಿದ ಭಾಷಣದಲ್ಲಿ— ಜಿಲ್ಲೆಗಳ ಸ್ಥಳೀಯ ಅವಶ್ಯಕತೆಗಳ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಮುಂದಕ್ಕೆ ಚಾಚುವುದಕ್ಕಾಗಿ ಜಿಲ್ಲಾ ಮಟ್ಟದ ಪತ್ರಿಕೆಗಳನ್ನು ಹೊರಡಿಸುವುದರ ಅವಶ್ಯಕತೆಯನ್ನು ಒತ್ತಿ ಹೇಳಿದರು.

●

ಭೂಸುಧಾರಣೆ ಪ್ರತಿಭಟನೆ

ಹುಬ್ಬಳ್ಳಿ— ಖ್ಯಾತ ಸ್ವತಂತ್ರ ಹೋರಾಟಗಾರರೂ ಗಾಂಧೀತತ್ವ ಕಾರ್ಯಕರ್ತರೂ ಆದ ಅದರಗುಂಚಿಯ ಶ್ರೀ ಶಂಕರಗೌಡ ಪಾಟೀಲರು, ಭೂಸುಧಾರಣ ಶಾಸನದಲ್ಲಿ, ದೇವಾಲಯ, ಮತ್ತು ಇತರ ಧಾರ್ಮಿಕ ಸಂಸ್ಥೆಗಳಿಗೆ ಸೇವೆಗಳ ಭೂಮಿಗಳ ಮೇಲೆ ಅವರಿಗಿರುವ ಹಕ್ಕನ್ನು ಶಾಸನದಲ್ಲಿ ತೆಗೆದುಹಾಕಿರುವುದನ್ನು ಪ್ರತಿಭಟಿಸಿ, ಅವರ ಗ್ರಾಮದ ಬಸವೇಶ್ವರ ದೇವಸ್ಥಾನದಲ್ಲಿ ಏಪ್ರಿಲ್ 8 ರಿಂದ ಅನಿರ್ದಿಷ್ಟ ಉಪವಾಸ ಪ್ರಾರಂಭಿಸುವರು.

★

ಭಾಷಾವಾರು ಗಲಭೆಗಳ ಸಂಬಂಧದಲ್ಲಿ

ಕೊಲ್ಲಾಪುರ— ಕಳೆದ ಡಿಸೆಂಬರಿನಲ್ಲಿ ನಡೆದ ಭಾಷಾವಾರು ಗಲಭೆಗಳ ಕಾಲದಲ್ಲಿ ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ವಲಸೆ ಬಂದ 11 ವಿದ್ಯಾರ್ಥಿಗಳಿಗೆ ತಲಾ ರೂ 5 ಸಾವಿರ ಕೊಡಲಾಯಿತೆಂದು ಪೈಸ್ ನೋಟು ತಿಳಿಸುತ್ತದೆ — ಗಲಭೆಯಲ್ಲಿ ಸಂಗಟ್ಟಿ ಕ್ರೀಡಾದವರ ಸಹಾಯಾರ್ಥವಾಗಿ ರೂ 7 8 ಲಕ್ಷ ಕೊಡಲಾಯಿತೆಂದೂ ತಿಳಿಸಲಾಗಿದೆ.

ಚಿತ್ರ ಭೂಮಾಲೀಕರು

ಮೈಸೂರು— ಇಲ್ಲಿ ನಡೆದ ಭೂಮಾಲೀಕರ ಸಭೆಯಲ್ಲಿ ಹೊಸ ಭೂ ಸುಧಾರಣ ಶಾಸನದಿಂದ ಚಿತ್ರ ಭೂಮಾಲೀಕರಿಗೆ ಆಗಿರುವ ಕೊಂದರೆಗಳನ್ನು ಹಲವು ಭಾಷಣಕಾರರು ವಿವರಿಸಿದರು — ಅವಶ್ಯಕ ಪರಿಹಾರ ಪಡೆಯಲು ಕೋರ್ಟ್‌ನಲ್ಲಿ ರಿಟ್ ಅರ್ಜಿ ಹಾಕಲು ನಿರ್ಧರಿಸಲಾಯಿತು.

★

ಅಕ್ರಮ ಸಾಗಾಣಿಕೆ ಗಡಿಯಾರಗಳು

ನವದೆಹಲಿ— 1973 ರಲ್ಲಿ ದೇಶಕ್ಕೆ ರೂ 250 ಲಕ್ಷ ಬೆಲೆಯ ಕೈಗಡಿಯಾರಗಳ ಅಕ್ರಮ ಸಾಗಾಣಿಕೆಯಾಗಿರುವುದೆಂದು ಲೋಕಸಭೆಯಲ್ಲಿ ತಿಳಿಸಲಾಯ್ತು.

★

ಶಾಂತಿ ವಲಯ

ನವದೆಹಲಿ— ವಿಶ್ವ ಸಂಸ್ಥೆ ಜನರಲ್ ಅಸೆಂಬ್ಲಿ ನಿರ್ಣಯಿಸಿರುವಂತೆ, ಶಾಂತಿ ಸಾಗರವು ಶಾಂತಿ ವಲಯವನ್ನಾಗಿರುವಂಥ ಮನೋಭಾವಕ್ಕೆ ಒತ್ತಾಸೆ ಕೊಡಲು ಎಲ್ಲ ರಾಷ್ಟ್ರಗಳಿಗೂ ಭಾರತ ಮತ್ತು ಇಕಾರ್ಕ ಕರೆ ಇತ್ತಿವೆ.

ಬೆಲೆ ಏರಿಕೆ

ನವದೆಹಲಿ— ಗೋಧಿ ಮತ್ತು ಕಾಂಟ್ರೋಲು ಬಟ್ಟೆಗಳ ಬೆಲೆಯನ್ನು ಶೇಕಡ ಸಮಾರು 40 ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ.

ಗೋಲಿ ವಿಷಯ

ನವದೆಹಲಿ— ಈಗ ಇರುವ ಬೆಲೆಗಳನ್ನು ಅಷ್ಟಕ್ಕೇ ನಿಲ್ಲಿಸಬಹುದೇ ಹೊರತು ಕೆಲ ಕಾಲ ಇಳಿಸಲು ಆಗುವುದಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಬೀಡಿ ಕೆಲಸಗಾರರಿಗೆ

ನವದೆಹಲಿ— ಬೀಡಿ ಕೆಲಸಗಾರರಿಗೆ ಕಲ್ಯಾಣ ನಿಧಿ ಸ್ಥಾಪಿಸುವ ವಿಷಯ ಸರಕಾರದ ಪರಿಶೀಲನೆಯಲ್ಲಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು

●

144 ನೇ ಸೆಕ್ಷನ್ ಜಾರಿ

ಹಾಸನ— ತಾ|| 28 ರಾತ್ರಿ ಎರಡು ಗುಂಪುಗಳಲ್ಲಿ ಘರ್ಷಣೆಯಾದುದರಿಂದ 1 ವಾರ ಮುನ್ನೆಚ್ಚರಿಕೆಯಿಂದ ಸೆಕ್ಷನ್ 144 ಜಾರಿಮಾಡಲಾಗಿದೆ.

★

ಕಾಶ್ಮೀರ

ಶ್ರೀನಗರ— ಕಾಶ್ಮೀರ ಸಂಬಂಧದಲ್ಲಿ ಇಂದಿರಾ ಗಾಂಧಿಯವರು ಹೊಸ ಅಧ್ಯಾಯ ಪ್ರಾರಂಭಿಸುವವರಾಗಿರುವರೆಂದು ಹಜರತ್‌ಬಾಲ್‌ನಲ್ಲಿ ಪ್ರಾರ್ಥನಾ ಸಭೆಗಳಲ್ಲಿ ಪೀರ್ ಅಬ್ದುಲ್ಲಾರವರು ಹೇಳಿದರು — ಕಾಶ್ಮೀರದ ಪರಿಹಾರಕ್ಕೆ ತಾವು ಸರಿಯಾದ ವಾತಾವರಣ ಸೃಷ್ಟಿಸಲು ಪ್ರಯತ್ನಿಸುತ್ತಿರುವುದಾಗಿಯೂ, ಅಂದರೆ "ನಿಮ್ಮನ್ನು ವಜಾಮಾಡುವೆ" ನೆಂದು ಅರ್ಥವಲ್ಲವೆಂದೂ ಹೇಳಿದರು.

★

ಇದೊಂದು ಸ್ವಾರಸ್ಯ

ನವದೆಹಲಿ— ನ್ಯಾಷನಲ್ ಸೀಡ್ಸ್ ಕಾರ್ಪೊರೇಷನ್ ಸಭೆಯಲ್ಲಿ ಅಧ್ಯಕ್ಷರಾಗಲಿ, ಮ್ಯಾನೇಜಿಂಗ್ ಡೈರೆಕ್ಟರಾಗಲಿ, ಡೈರೆಕ್ಟರು ಮಂಡಲಿಯಲ್ಲಾಗಲಿ ಹೊಂದಿಲ್ಲವೆಂದು ವರದಿ ತಿಳಿಸುತ್ತದೆ.

ಪಾಂಡಿಚೆರಿಯಲ್ಲಿ

ನವದೆಹಲಿ— ಪಾಂಡಿಚೆರಿಯಲ್ಲಿ ಅಧ್ಯಕ್ಷರ ಆಳ್ವಿಕೆ ಜಾರಿಗೆ ಬಂದಿತು — ಹೊಸ ಚುನಾವಣೆ ಶೀಘ್ರದಲ್ಲೇ ನಡೆಯಲಿದೆ.

★

ಚೀನಾ ನಿಂದನೆ

ಹಾಂಕಾಂಗ್— ಅಮೇರಿಕಾ ಮತ್ತು ರಷ್ಯಾಗಳು ಶಾಂತಿ ಸಾಗರದಲ್ಲಿ ಶಾಂತಿ ಭಂಗಕ್ಕೆ ಪ್ರಯತ್ನಿಸುತ್ತವೆ ಎಂದು ಚೀನ ನಿಂದಿಸಿದೆ.

★

ಸಿನಿಮಾ ಸಂಬಂಧದ ಯೋಜನೆ

ನವದೆಹಲಿ— ಪ್ರತಿ ಸಿನಿಮಾ ಟಿಕೇಟಿನ ಮೇಲೆ 5 ಪೈಸೆ ಸೆಸ್ ಹಾಕಿ, ಆ ಹಣವನ್ನು ಉತ್ತಮ ಚಿತ್ರ ತಯಾರಿಸುವವರಿಗೆ ಸಾಲವಾಗಿ ಕೊಡುವ ಯೋಜನೆಯು ಸರಕಾರದ ಪರಿಶೀಲನೆಯಲ್ಲಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಚುನಾವಣೆ ಕಣ

ವಾಷಿಂಗ್ಟನ್— 1972 ರಲ್ಲಿ ಅಮೇರಿಕಾ ಅಧ್ಯಕ್ಷತೆ ಚಳುವಳಿಯಲ್ಲಿ ನಾಲ್ಕು ಅಭ್ಯರ್ಥಿಗಳಿಗೆ 126 ಮಿಲಿಯ ಡಾಲರು (ರೂ. 94 5 ಕೋಟಿ) ಶೇಖರಿಸಲಾಗಿತ್ತು — ಈ ವೈಕಿ ಅಧ್ಯಕ್ಷ ನಿಕ್ಸನ್ನರ ಪುನರ್ ಚುನಾವಣಾ ಸಮಿತಿಯು ಅರ್ಧದಷ್ಟು ಶೇಖರಿಸಿತು.

★

ಬೀಹಾರಿನಲ್ಲಿ ಬಿಕ್ಕಟ್ಟು

ಪಾಟ್ನಾ— ಅಬ್ದುಲ್ ಗಫೂರ್ ಮಂತ್ರಿ ಮಂಡಲವು ಏಪ್ರಿಲ್ 8 ರೊಳಗೆ ರಾಜೀನಾಮೆ ಕೊಡದಿದ್ದರೆ, ಸರಕಾರವನ್ನು ತಳಮುಳಿಸಲು ಅನಿರ್ದಿಷ್ಟ ಚಳುವಳಿ ಹೂಡುವುದಾಗಿ ಬೀಹಾರ್ ರಾಜ್ಯದ ವಿದ್ಯಾರ್ಥಿ ಕಾರ್ಯ ಸಮಿತಿ ಪ್ರಕಟಿಸಿದೆ.

★ ಪಶ್ಚಿಮ ಬಂಗಾಳದಲ್ಲಿನ ಸೇನಿ ಮಂತ್ರಿ ಮಂಡಲ ತೆಗೆಯಹಾಕಿ, ಶಾಸನಸಭಾ ವಿಸರ್ಜನೆ, ಹೊಸ ಚುನಾವಣೆ ನಡೆಸಲು ಒತ್ತಾಯಿಸಿ ಚಳವಳಿ ಕೂಡಲು ವಿರೋಧ ಗುಂಪಿನ ಸಮಿತಿ ರಚಿಸಲಾಗಿದೆ.

ಎಲೆಕ್ಟ್ರಾನಿಕ್ ವೃತ್ತಪತ್ರಿಕೆಗಳು

ಸಂಪೂರ್ಣ ಎಲೆಕ್ಟ್ರಾನಿಕ್ ವಿಧಾನದಲ್ಲಿ ಮುದ್ರಣಾಕ್ಷರಗಳ ಜೋಡಣೆ ಮತ್ತು ಮುತ್ತು ಸಂವಾದನ ಕಾರ್ಯನಿರ್ವಹಣೆ ನಾಳಿನ ಭವಿಷ್ಯದ ವಿಷಯವಲ್ಲ ; ಇಂದು ಅಮೇರಿಕಾದಾದ್ಯಂತ ವೃತ್ತಪತ್ರಿಕೆಗಳು ತ್ವರಿತ ಗತಿಯಲ್ಲಿ ಈ ವಿಧಾನವನ್ನು ಬಳಕೆಗೆ ತರುತ್ತಿವೆ. ಚಿಕ್ಕ ಪಟ್ಟಣಗಳು ಹಾಗೂ ದೊಡ್ಡ ನಗರಗಳಲ್ಲಿ ನೂರಾರು ವೃತ್ತ ಪತ್ರಿಕೆಗಳು ಬರುವ ಸುದ್ದಿಗಳು ಮುದ್ರಿತ ಪುಟಗಳಾಗಿ ಪರಿವರ್ತಿಸಲು ಕಂಪ್ಯೂಟರುಗಳು " ವೀಡಿಯೋ ಡಿಸಪ್ಲೇ ಟರ್ಮಿನಲ್ ' ಗಳ, ಆಫ್‌ಸೆಟ್ಟ್ ಮುದ್ರಣ ಮತ್ತು ಫೋಟೋಕಾಂಪೊಸಿಷನ್ ಯಂತ್ರಗಳೇ ಮೊದಲಾದ ನವೀನ ಸಾಧನಗಳನ್ನು ಬಳಸುತ್ತಿವೆ.

ಫವದೆಹಲಿ — ಕಳೆದ ಒಂದು ತಿಂಗಳಿಂದ ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಪೆಟ್ರೋಲು ಪದಾರ್ಥಗಳ ಬೆಲೆ ತಗ್ಗಿದೆ – ಸೀನುಎಣ್ಣೆ ಟನ್‌ಗೆ 40 ಡಾಲರು ಇಳಿದಿದೆ.

Remember

You are quite safe in your dealings with

Bank Road Bahusar

Firm Noted for Genuine Good Business

SHAKTI SUDHA

A Superb Tonic

Contribute Liberally to the National Defence Fund

Quality Printing Neat Binding

Lakshminarasimha Press

Sivarampet, Mysore 1

ವುಡ್‌ಲಾಂಡ್ 29 3 74 ರಿಂದ

ಅವೋಘ ಆರಂಭ

ರಿಕ್‌ಷಾವಾಲಾ

ಹಿಂದಿ ಕಲರ್ ಮಹೋನ್ನತ ಚಿತ್ರ ಸಂಗೀತ : ಎಸ್. ಡಿ. ಬರ್ಮನ್

ಪಾತ್ರ – ರಣಧೀರ್ ಕಪೂರ್ ನೀತು ಸಿಂಗ್ ಪ್ರಾಣ್ ಮಾಲಾಸಿನ್ಹಾ

ದಿನ 3 ಪ್ರದರ್ಶನಗಳು

ಅಪೆರಾ 22 3 74 ರಿಂದ

ಜಿನೆನ್ಸ್

ಯೂನಿವರ್ಸಲ್ ಪಿಕ್ಚರ್ಸ್‌ರವರ ಈಸ್ಟ್‌ಮನ್ ಕಲರ್ ತಮಿಳು ಚಿತ್ರ

ಪಾತ್ರ — ಜೆಮಿನಿ ಗಣೇಶ್ ಸುಂದರರಾಜ್ ನಿರ್ಮಲ ನಂಬಿಯಾರ್

ದಿನ 3 ಪ್ರದರ್ಶನಗಳು

ಭಾರತದಲಿ ಗೋವಧೆ



ಪೂರ್ಣ ನಿಶೇಧವಾಗಲಿ

Protect the Cow

Help The Gorakshana

— Humanitarian Propoganda Monthly....

Edited Printed and Published by Dharmapracharanirata M S Krishna Rao (Proprietor) at the Satvavadi Press, Chamaraja puram Mysore